ಆಲಮಟ್ಟಿ ನಾರಾಯಣಪುರ ರಸ್ತೆ

4. (275) ಶ್ರೀ ಅಪ್ಪಾಜಿ. ಚನ್ನಬಸವರಾಜ್ ಶಂಕರರಾವ್ ನಾಡಗೌಡ (ಮುದ್ದೇಬಿಹಾಳ):– ಮಾನ್ಯ ಜಲಸಂಪನ್ಮೂಲ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಆಲಮಟ್ಟಿಯಿಂದ ನಾರಾಯಣಪುರಕ್ಕೆ ಸೇರುವ ಮುಖ್ಯರಸ್ತೆ ಸಂಚಾರವು ಯೋಗ್ಯ ಸ್ಥಿತಿಯಲ್ಲಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ರಸ್ತೆಯು ಒಟ್ಟು ಎಷ್ಟು ಕಿ.ಮೀ. ಉದ್ದ ಇರುತ್ತದೆ.;

ಇ) ಈ ರಸ್ತೆಯನ್ನು ದರಸ್ತಿ ಮಾಡಿ ಸಂಚಾರಕ್ಕೆ ಯೋಗ್ಯ ಮಾಡಲು ಸರ್ಕಾರವು ಯಾವ ಕ್ರಮ ಕೈಗೊಂಡಿದೆ (ಮಾಹಿತಿ ನೀಡುವುದು)

ಶ್ರೀ ಬಸವರಾಜ ಬೊಮ್ಮಯಿ (ಮಾನ್ಯ ಜಲಸಂಪನ್ಮೂಲ ಸಚಿವರು):–

ಅ) ಬಂದಿದೆ.

ಆ) ಆಲಮಟ್ಟಿಯಿಂದ ಮುದ್ದೇಬಿಹಾಳದವರೆಗೆ 27 ಕಿ.ಮೀ. ಉದ್ದ ಇದ್ದು, ಮತ್ತು ಮುದ್ದೇಬಿಹಾಳದಿಂದ ನಾರಾಯಣಪೂರದವರೆಗೆ 30.6 ಕಿ.ಮೀ. ಉದ್ದ ಇರುತ್ತದೆ.

ಇ) ಈ ರಸ್ತೆಯನ್ನು ಜಿಲ್ಲಾ ಮುಖ್ಯ ರಸ್ತೆಗೆ ಮೇಲ್ದರ್ಜೆಗೇರಿಸಿ ಅಭಿವೃದ್ಧಿಪಡಿಸಲು ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಆದೇಶ ಹೊರಡಿಸಿದೆ. ಆದರೂ ರಸ್ತೆಯು ಬಹಳಷ್ಟು ಹಾಳಾಗಿರುವುದರಿಂದ ಸಂಚಾರಕ್ಕೆ ಉಪಯುಕ್ತಗೊಳಿಸಲು ಬೇಕಾದ ದುರಸ್ಥಿಯನ್ನು ಕೃಷ್ಣಾ ಭಾಗ್ಯ ಜಲ ನಿಗಮದ ವತಿಯಿಂದ ತೆಗೆದುಕೊಳ್ಳಲಾಗುವುದು.

ಮುದ್ದೇಬಿಹಾಳ ತಂಗಡಿ ರಸ್ತೆ

5. (276) ಶ್ರೀ ಅಪ್ಪಾಜಿ. ಚನ್ನಬಸವರಾಜ್ ಶಂಕರರಾವ್ ನಾಡಗೌಡ (ಮುದ್ದೇಬಿಹಾಳ):– ಮಾನ್ಯ ಜಲಸಂಪನ್ಮೂಲ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಮುದ್ದೇಬಿಹಾಳ–ತಂಗಡಗಿ ರಸ್ತೆಯನ್ನು ಕಳೆದ ಮೂರು ವರ್ಷದಲ್ಲಿ ಎಷ್ಟು ಸಲ ದುರಸ್ತಿ ಮಾಡಲಾಗಿದೆ;

ಆ) ಈ ರಸ್ತೆ ತುಂಬಾ ನಾದುರಸ್ತಿಯಾಗಿದ್ದು, ಸಂಚಾರಕ್ಕೆ ಯೋಗ್ಯ ಸ್ಥಿತಿಯಲ್ಲಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಕಳೆದ ವರ್ಷ ಈ ರಸ್ತೆಯನ್ನು ದುರಸ್ತಿ ಮಾಡುವ ಆಶ್ವಾಸನೆ ನೀಡಿದ್ದು, ಇನ್ನೂ ಕೆಲಸ ಪ್ರಾರಂಭ ಮಾಡದೆ ವಿಳಂಬವಾಗಲು ಕಾರಣವೇನು;

ಈ) ಎಂದಿನಿಂದ ರಸ್ತೆಯನ್ನು ಸಂಪೂರ್ಣ ದುರಸ್ತಿ ಮಾಡಲಾಗುವುದು;

ಶ್ರೀ ಬಸವರಾಜ ಬೊಮ್ಮಯಿ (ಮಾನ್ಯ ಜಲಸಂಪನ್ಮೂಲ ಸಚಿವರು):–

ಅ) ಮುದ್ದೇಬಿಹಾಳ ತಂಗಡಗಿ ರಸ್ತೆಯನ್ನು ಕಳೆದ ಮೂರು ವರ್ಷಗಳಲ್ಲಿ ಎರಡು ಬಾರಿ ದುರಸ್ತಿ ಮಾಡಲಾಗಿದೆ. ಮೊದಲನೇ ಬಾರಿ ಈ ರಸ್ತೆಯ ಪೂರ್ಣ ಉದ್ದ ಕಿ.ಮೀ. 16.6 ವರೆಗೆ Asphalting ಮಾಡಲಾಗಿದ್ದು, ಎರಡನೇ ಬಾರಿ ಅಲ್ಲಲ್ಲಿ ಗುಂಡಿಗಳನ್ನು ಮುಚ್ಚಲಾಗಿರುತ್ತದೆ.

ಆ) ಬಂದಿದೆ

ಇ) ಕಳೆದ ವರ್ಷ ಗುಂಡಿ ಮುಚ್ಚುವ ಕಾಮಗಾರಿಯನ್ನು ಕೈಗೆತ್ತಿಕೊಂಡು ಪೂರ್ಣಗೊಳಿಸಲಾಗಿರುತ್ತದೆ. ಈ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿ (60) ಗೆ ಮೇಲ್ದರ್ಜೆಗೇರಿಸಿ ಅಭಿವೃದ್ಧಿಪಡಿಸಲು ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಆದೇಶ ಹೊರಡಿಸಿದೆ. ಆದರೂ ರಸ್ತೆಯು ಬಹಳಷ್ಟು ಹಾಳಾಗಿರುವುದರಿಂದ ಸಂಚಾರಕ್ಕೆ ಉಪಯುಕ್ತಗೊಳಿಸಲು ಬೇಕಾದ ದುರಸ್ಥಿಯನ್ನು ಕೃಷ್ಣಾ ಭಾಗ್ಯ ಜಲ ನಿಗಮದ ವತಿಯಿಂದ ತೆಗೆದುಕೊಳ್ಳಲಾಗುವುದು.

ವಿಷಯ: ಅತಿಕ್ರಮಣಕಾರರನ್ನು ತೆರವುಗೊಳಿಸುವುದು

6 (246) ಶ್ರೀ ಅಪ್ಪಾಸಾಹೇಬ (ಅಪ್ಪು) ಮಲ್ಲಪ್ಪ ಪಟ್ಟಣಶೆಟ್ಟಿ (ಬಿಜಾಪುರ ನಗರ) :– ಮಾನ್ಯ ಸಣ್ಣ ನೀರಾವರಿ, ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಬಿಜಾಪುರ ನಗರದಲ್ಲಿನ ಪ್ರಾಚ್ಯವಸ್ತು ಐತಿಹಾಸಿಕ ಸ್ಮಾರಕಗಳ ಪ್ರದೇಶಗಳಲ್ಲಿ ಅತಿಕ್ರಮಣಕಾರರು ಅತಿಕ್ರಮಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;